**PW.1**

**(ಇಂದು ದಿಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿಯರ ಪರ ಶ್ರೀ.SDR ವಕೀಲರಿಂದಃ-**

ಸರ್ವೇ ನಂಜಬರ 651 ರಲ್ಲಿ ಮುಂಚೆ ಎಷ್ಟು ವಿರ್ಸಿಣ ಇತ್ತು ನನಗೆ ಗೊತ್ತಿಲ್ಲ . ವಿಸ್ತೀರ್ಣ 18 ಎಕರೆ 19 ಗುಂಟೆ ಇತ್ತು ಎಂದರೆ ಸರಿ. ದಾವಾ ಆಸ್ತಿಯನ್ನು ಸೀಮೇಂಟ ಕಂಪನಿಯವರು ಪೂರ್ತಿ ಜಮೀನನ್ನು ಭೂ ಸ್ವಾ ದೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದದುವರೆದು 1 ಎಕರೆ ಚಿಲ್ಲರೆ ಗುಂಟೆ ಉಳಿದುಕೊಂಡಿದೆ ಎಂದು ಹೇಳುತ್ತಾರೆ. ಪೂರ್ತಿ 18 ಎಕರೆ 19 ಗುಂಟೆ ಜಮೀನನ್ನು 7 ನೇ ಪ್ರತಿವಾದಿ ವಶಪಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 1 ಎಕರೆ ಚಿಲ್ಲರೆ ಗುಂಟೆ ಬಿಟ್ಟು ಉಳಿದ ಜಮೀನನ್ನು ಭೂ ಸ್ವಾ ಧೀನ ಪಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. 1 ಎಕರೆ ಚಿಲ್ಲರೆ ಗುಂಟೆ ಜಮೀನು ಉಳಿದುಕೊಂಡಿದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 1 ಎಕರೆ 11 ಗುಂಟೆ ಸ್ವತ್ತಿಗೆ ಸಂಬಂದಪಟ್ಟಂತೆ 1 ರಿಂದ 4ನೇ ಪ್ರತಿವಾದಿಯರು ಉಪ ವಿಭಾಗ ಅಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿ ತಮ್ಮ ಪರ ಆದೇಶ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, 1 ಎಕರೆ 11 ಗುಂಟೆ ಜಮೀನನ್ನು ಅಳತೆ ಮಾಡಿಸುವ ಸಲುವಾಗಿ 1 ರಿಂದ 4 ನೇ ಪ್ರತಿವಾದಿಯರು 3 – 4 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ, ಉಪ ವಿಭಾಗ ಅಧಿಕಾರಿಗಳ ನ್ಯಾಯಾಲಯದಲ್ಲಿ ಆದ ಆದೇಶವನ್ನು ಜಿಲ್ಲಾ ಅಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಯಿತು ಎಂದರೆ ಸರಿಯಲ್ಲ,

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ದೊಡ್ಡಪ್ಪ ಉಪ ವಿಭಾಗ ಅಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ . 18 ಎಕರೆ 19 ಗುಂಟೆ ಜಮೀನನ್ನು ನಾನು ನೋಡಿ 30 ವರ್ಷ ಆಗಿದೆ. 1 ಎಕರೆ 11 ಗುಂಟೆ ಜಮೀನಿನಲ್ಲಿ ಕಲಬುರಗಿ - ಸೇಡಂ ರಸ್ತೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ, 20 ವರ್ಿ್ಗಳ ಹಿಂದೆ 1 ರಿಂದ 4 ನೇ ಪ್ರತಿವಾದಿಯರು ಬೇರೆ ಆಗಿದ್ದಾರೆ . ನನ್ನ ತಂದೆ ತೀರಿ ಹೋದ ಮೇಲೆ ಬೇರೆ ಆಗಿದ್ದಾರೆ . ದಾವಾ ಆಿಸ್ತಿ 1 ರಿಂದ 4 ನೇ ಪ್ರತಿವಾವದಿಯರಿಗೆ ಮಾತ್ರ ಸಂಬಂಧಟ್ಟಿದ್ದು ಇದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸರಿಯಾಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**

**PW.2**

**(ಇಂದು ದಿಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ<u>ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿಯರ ಪರ ಶ್ರೀ.SDR ವಕೀಲರಿಂದಃ-</u>**

ಸರ್ವೇ ನಂಬರ 651 ರ ವಿಸ್ತೀರ್ಣ ನನಗೆ ಗೊತ್ತಿಲ್ಲ, ಮುಂಚೆ ಸರ್ವೇ ನಂ. 651 ರ ಜಮೀನು ನನ್ನ ತಂದೆ  ಹೆಸರಿನಲ್ಲಿತ್ತು. ಪೂರ್ತಿ 18 ಎಕರೆ 19 ಗುಂಟೆ ಜಮೀನನ್ನು  7ನೇ ಪ್ರತಿವಾದಿ ಭೂ ಸ್ವಾ ದೀನ ಪಡಿಸಿಕೊಂಡರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದದು 1 ಎಕರೆ ಚಿಲ್ಲರೆ ಉಳಿದಿದೆ ಎಂದು ಹೇಳುತ್ತಾರೆ. ಯಾವುದೇ ಜಮೀನು ಉಳಿದಿಲ್ಲ ಎಂದರೆ ಸರಿಯಲ್ಲ, ಭೂ ಸ್ವಾ ದೀನ ಆದ ನಂತರ 1 ರಿಂದ 4ನೇ ಪ್ರತಿವಾದಿಯರು ಉಫ ವಿಭಾಗ ಅಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಮತ್ತು ಸದರಿ ಮೇಲ್ಮನವಿ ಮಂಜೂರಾಗಿದೆ ಎಂದರೆ ಸರಿ. 1 ರಿಂದ 04 ಪ್ರತಿವಾದಿಯರ ಪರ 1 ಎಕರೆ 11 ಗುಂಟೆ ಸಂಬಂಧ ಉಪ ವಿಭಾಗ ಅಧಿಕಾರಿಗಳು ಮಾಡಿದ ಆದೇಶವನ್ನು ನಾನು ಜಿಲ್ಲಾ ಅಧಿಕಾರಿಗಳ ಮುಂದೆ ಪ್ರಶ್ನೆ ಮಾಡಿದ್ದೇ. ಸದರಿ ಮೇಲ್ಮನವಿ ವಜಾ ಆಯಿತು ಎಂದರೆ ಸರಿ. 1 ಎಕರೆ 11 ಗುಎಂಟೆ ಜಮೀನು ನಮಗೆ ಬರಬೇಕು ಎಂದು 1 ರಿಂದ 4 ನೇ ಪ್ರತಿವಾದಿಯರು ಸರ್ವೇ ಇಲಾಖೆ ಯಲ್ಲಿ 3 -  4 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ, 1 ಎಕರೆ 11 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಬಿಕ್ಕುಸಿಂಗ್ ಸಹೋದರರು ಉಪ ವಿಭಾಗ ಅಧಿಕಾರಿಗಳ ಮುಂದೆ ಮೇಲ್ಮನಳವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ,  ಸದರಿ ಮೇಲ್ಮನವಿ ಯಲ್ಲಿ ದಾವಾ ಜಮೀನು 1 ರಿಂದ 4 ನಂೀ ಪ್ರತಿವಾದಿಯರಿಗೆ ಸೇರಿದ್ದು ಎಂದು ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ, 1 ರಿಂದ 4 ನೇ ಪ್ರತಿವಾದಿಯರು ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣ ನಡೆಸಲು ಸುಮಾರು 3 – 4 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸರಿ . ನಾನು 26

ವರ್ಷಗಳಿಂದ ದಾವಾ ಜಮೀನಿಗೆ ಹೋಗಿಲ್ಲ, ದಾವಾ ಸ್ವತ್ತಿನಲ್ಲಿ ಡಾಂಬರ್ ರಸ್ತೆ ಇದೆ ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿಯರು 20 ವರ್ಷ ಗಳ ಹಿಂದೆ ಬೇರೆ ಅಗಿದ್ದಾರೆ . ನನ್ನ ತಂದೆ ಬದುಕಿದ್ದಾಗ ಬೇರೆ ಆಗಿಲ್ಲ, ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಭಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ, ದಾವಾ ಆಸ್ತಿ 1 ರಿಂದ 4 ನೇ ಪ್ರತಿವಾದಿಯರಿಗೆ ಮಾತ್ರ ಸಂಬಂಧಪಟ್ಟಿದ್ದು ಅದರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**

PW.4

**(ಇಂದು ದಿಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- 1, 2 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ.NR ವಕೀಲರಿಂದಃ-</u>**

ನನ್ನ ತಂದೆಯ ಹೆಸರು ವಿಠಲ್ ರಾವ್. ನನ್ನ ತಾತನ ಹೆಸರು ಸಾಯಬಣ್ಣ. ವಿಠಲ್ ರಾವ್ ತಂದೆ ಸಾಯಬಣ್ಣ ಕೊಡ್ಲಾದವರು. ಸಿದ್ದಣ್ಣನ ತಂದೆ ಹೆಸರು ಸಾಬಣ್ಣ. ಸದರಿ ಸಾಬಣ್ಣನ ತಂದೆ ಹೆಸರು ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರು ಸಾಬಣ್ಣ, ಸಿದ್ದಣ್ಣ ತಂದೆ ಸಾಬಣ್ಣ ಮತ್ತು ನನ್ನ ತಾತ ಸಾಬಣ್ಣ ಬೇರೆ ಬೇರೆ ಎಂದರೆ ಸರಿ. ಸಾಕ್ಷಿ ಮುಂದುವೆರೆದು ದಾಯಾದಿಗಳು ಆಗಬೇಕು ಎಂದು ಹೇಳುತ್ತಾರೆ. ನಮ್ಮ ಮನೆಯ ಅಡ್ಡ ಹೆಸರು ಹೊನ್ನನಾಯಕ. ಕೊಡ್ಲಾದಲ್ಲಿ ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕ ಅನ್ನುವ ಹೆಸರಿನ ವ್ಯಕ್ತಿ ಒಬ್ಬರೆ ಇದ್ದರು ಎಂದರೆ ಸರಿ. ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕರವರಿಗೆ ಎಷ್ಟು ಸರ್ವೇ ನಂಬರಗಳಲ್ಲಿ ಜಮೀನುಗಳು ಇದ್ದವು ನನಗೆ ಗೊತ್ತಿಲ್ಲ. ನನಗೆ ಜಮೀನು ಇಲ್ಲ, ಮನೆ ಇದೆ. ಮನೆಯ ನಂಬರ ಗೊತ್ತಿಲ್ಲ. ಮಳಖೇಡ ಮತದಾರರ ಯಾದಿಯಲ್ಲಿ ನನ್ನ ಹೆಸರು ಇದೆ. ನನ್ನ ಆಧಾರ ಕಾರ್ಡ ಮಳಖೇಡ ವಿಳಾಸದಲ್ಲಿದೆ. ನಾನು ಕೊಡ್ಲಾದವನು ಎಂದು ಯಾವುದೇ ದಾಖಲಾತಿ ಇಲ್ಲ. ನಮ್ಮ ಮನೆ ನನ್ನ ತಾತ ಸಾಯಬಣ್ಣ ನ ಹೆಸರಿನಲ್ಲಿದೆ. ನನ್ನ ತಾತ ಸಾಯಬಣ್ಣನ ತಂದೆ ಹೆಸರು ನನಗೆ ಗೊತ್ತಿಲ್ಲ. ನಮ್ಮ ಮನೆಯ ಪೂರ್ವಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ಯಾರ ಮನೆ ಇದೆ ಎಂದು ಗೊತ್ತಿಲ್ಲ, ಉತ್ತರಕ್ಕೆ ಯಾರ ಮನೆ ಇದೆ ಎಂದು ಗೊತ್ತಿಲ್ಲ, ದಕ್ಷಿಣಕ್ಕೆ ಯಾರ ಮನೆ ಇದೆ ಎಂದು ಗೊತ್ತಿಲ್ಲ. ಸಿದ್ದಣ್ಣ ತಂದೆ ಸಾಬಣ್ಣ ಯಾವ ಗ್ರಾಮದವರು ನನಗೆ ಗೊತ್ತಿಲ್ಲ. ಸಿದ್ದಣ್ಣ ತಂದೆ ಸಾಬಣ್ಣರವರಿಗೆ ಯದ್ಲಾಪುರ ಎಂಬ ಅಡ್ಡ ಹೆಸರಿನಿಂದ ಕೂಡ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದದು ಹೊನ್ನನಾಯಕ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ಸಾಬಣ್ಣನ ತಂದೆ ಕಾಶಪ್ಪ ಸ್ವಂತ ಊರು ಯದ್ಲಾಪುರ ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ಕೊಡ್ಲಾಗೆ ಹೆಂಡತಿ ಮನೆಗೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ಒಬ್ಬರೇ ಯದ್ಲಾಪುರದಿಂದ ಕೊಡ್ಲಾಗೆ ಬಂದಿದ್ದು ಆತನಿಗೆ ಕೊಡ್ಲಾದಲ್ಲಿ ಯಾರು ಅಣ್ಣತಮ್ಮಂದಿರು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣನ ಹೆಂಡತಿ ಮನೆಯ ಅಡ್ಡ ಹೆಸರು ಹೊನ್ನನಾಯಕ ಇದ್ದು ಸಾಬಣ್ಣ ಅದನ್ನೇ ತನ್ನ ಅಡ್ಡ ಹೆಸರು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು

ಸಿದ್ದಣ್ಣನ ತಂದೆಯ ತಮ್ಮನ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಡ್ಲಾ ಗ್ರಾಮದವನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ಶರಣಪ್ಪನ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(5ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ BSS ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು.)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**